ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2019–20** **ದಿನಾಂಕ: 16–08–2019**

## ಪತ್ರಿಕಾ ಆಮಂತ್ರಣ

**1 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 'ಮನೆಯಂಗಳದಲ್ಲಿ ಮಾತುಕತೆ' ಕಾರ್ಯಕ್ರಮ:**

ತಿಂಗಳ ಅತಿಥಿ:

ಎಂ. ನಾಗೇಂದ್ರ,
ಜಾನಪದ ಗಾಯಕರು, ಸಾಹಿತಿಗಳು
ಹಾಗೂ ಸಂಗೀತ ಸಂಯೋಜಕರು

ದಿನಾಂಕ: 17–08–2019 ಶನಿವಾರ ಸಮಯ : ಸಂಜೆ 4–00 ಗಂಟೆಗೆ

ಸ್ಥಳ : ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಕಾರ್ಮಿಕ ಇಲಾಖೆಗೆ ಸಹಾಯವಾಣಿ ಹಾಗೂ ಕಂಟ್ರೋಲ್ ರೂಂ

**ಬೆಂಗಳೂರು, ಆಗಸ್ಟ್ 16 ( ಕರ್ನಾಟಕ ವಾರ್ತೆ ) :**

ಸರ್ಕಾರದ ಕಾರ್ಮಿಕ ಸಚಿವಾಲಯ ವ್ಯಾಪ್ತಿಗೆ ಬರುವ ಕಾರ್ಮಿಕ ಇಲಾಖೆ, ಕಾರ್ಖಾನೆಗಳು ಮತ್ತು ಬಾಯ್ಲರುಗಳ ಇಲಾಖೆ, ಕಾರ್ಮಿಕರ ವಿಮಾ ಮತ್ತು ವೈದ್ಯಕೀಯ ಸೇವೆಗಳ ಇಲಾಖೆ ಮತ್ತಿತರ ಮಂಡಳಿಗಳು

ಸೊಸೈಟಿಗಳಲ್ಲಿ ಒದಗಿಸುತ್ತಿರುವ ಅನೇಕ ಸೇವೆಗಳು, ಸವಲತ್ತುಗಳು ಹಾಗೂ ದೂರುಗಳಿಗಾಗಿ 24 ಥ 7 ಉಚಿತ ಸಹಾಯವಾಣಿ ಸೇವೆಯನ್ನು ಹಾಗೂ ಕಂಟ್ರೋಲ್ ರೂಮ್ ಅನ್ನು ಒದಗಿಸಲು ಅನುಮೋದನೆ ದೊರೆತಿದೆ.

ಈಗ ಹಾಲಿ ಇರುವ ಸಹಾಯವಾಣಿ 1800–425–2992 ಅನ್ನು ಬಳಸಿಕೊಳ್ಳತಕ್ಕದ್ದು. ಮುಂದುವರೆದು 3 ಶಿಫ್ಟ್‌ಗಳಲ್ಲಿ ಕಾರ್ಮಿಕರು ಕೆಲಸ ನಿರ್ವಹಿಸುವುದು.

ಮೊದಲನೆಯ ಶಿಫ್ಟ್ : ಬೆಳಿಗ್ಗೆ 9–00 ರಿಂದ ಸಂಜೆ 6–00 ಗಂಟೆ (9 ಗಂಟೆ) ಸಹಾಯವಾಣಿ ನಿರ್ವಹಿಸುವವರಿಗೆ (8 ಗಂಟೆ) ಎರಡನೆ ಶಿಫ್ಟ್ : ಸಂಜೆ 6–00 ರಿಂದ ರಾತ್ರಿ 1–00 ಗಂಟೆವರೆಗೆ (7 ಗಂಟೆ). ಮೂರನೇ ಶಿಫ್ಟ್ : ರಾತ್ರಿ 1.00 ಗಂಟೆಯಿಂದ ಬೆಳಿಗ್ಗೆ 9–00 ಗಂಟೆವರೆಗೆ (8 ಗಂಟೆ).

ಕಾರ್ಮಿಕ ಇಲಾಖೆ ವ್ಯಾಪ್ತಿ ಬರುವ ಎಲ್ಲಾ ಇಲಾಖೆಗಳು, ನಿಗಮ ಮಂಡಳಿಗಳು ಈ ನಿಯಮ ಪಾಲಿಸತಕ್ಕದ್ದು. ಮೇಲ್ಕಂಡ ಶಿಫ್ಟ್‌ನಲ್ಲಿ ನೇಮಕಗೊಂಡ ನೌಕರರಿಗೆ ಬಿಪಿಒ ಸಂಸ್ಥೆಗಳಲ್ಲಿ ಕಿಯೋನಿಕ್ಸ್ ಮೂಲಕ ನಿಗಧಿಪಡಿಸುವ ಮೊತ್ತವನ್ನು ನೀಡಲು ಕ್ರಮ ಕೈಗೊಳ್ಳಲಾಗುವುದು. ಕನಿಷ್ಠ 2 ವರ್ಷದ ಅವಧಿಗೆ ಅಲ್ಪಾವಧಿ ಟೆಂಡರ್ ಮೂಲಕ ಮೊದಲ ಹಂತದಲ್ಲಿ ಶೇ 50 ರಷ್ಟು ನೌಕರರು ಅಂದರೆ 24 ನೌಕರರನ್ನು ತೆಗೆದುಕೊಳ್ಳಲು ತೀರ್ಮಾನಿಸಲಾಗಿದೆ. ಅಭ್ಯರ್ಥಿಗಳು ಪದವಿ ಅಥವಾ ಡಿಪ್ಲೊಮಾ ಹೊಂದಿರತಕ್ಕದ್ದು. ಇವರಿಗೆ ಕರ್ನಾಟಕ ಕಾರ್ಮಿಕ ಮಂಡಳಿಯ ನಿಯಮಗಳು ಅನ್ವಯಿಸಲಿದೆ ಎಂದು ಕಾರ್ಮಿಕ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮ
## ತಿಂಗಳ ಅತಿಥಿಯಾಗಿ ಜಾನಪದ ಗಾಯಕ ಎಂ. ನಾಗೇಂದ್ರ

ಬೆಂಗಳೂರು, ಆಗಸ್ಟ್ 16 ( ಕರ್ನಾಟಕ ವಾರ್ತೆ ) :

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ದಿನಾಂಕ: 17–08–2019 ರ ಶನಿವಾರ ಸಂಜೆ 4–00 ಗಂಟೆಗೆ ಹಮ್ಮಿಕೊಳ್ಳಲಾಗುವ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮದಲ್ಲಿ ಈ ತಿಂಗಳ ಅತಿಥಿಯಾಗಿ ಜಾನಪದ ಗಾಯಕರು, ಸಾಹಿತಿಗಳು ಹಾಗೂ ಸಂಗೀತ ಸಂಯೋಜಕರು ಆದ ಎಂ. ನಾಗೇಂದ್ರ ಅವರು ಪಾಲ್ಗೊಳ್ಳಲಿದ್ದಾರೆ

## ಯುವಕ ಯುವತಿಯರಿಗೆ ಉದ್ಯಮ ಸ್ನೇಹಿ ಕೌಶಲ್ಯಾಭಿವೃದ್ಧಿ ತರಬೇತಿ

ಬೆಂಗಳೂರು, ಆಗಸ್ಟ್ 16 ( ಕರ್ನಾಟಕ ವಾರ್ತೆ ) :

ಬಯೋಡೀಸಲ್ ಉತ್ಪಾದನೆ ಹಾಗೂ ಉದ್ಯಮದಲ್ಲಿ ಆಸಕ್ತಿ ಹೊಂದಿರುವ ಯುವಕ ಯುವತಿಯರಿಗೆ ಉದ್ಯಮ ಸ್ನೇಹಿ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ದಿನಾಂಕ: 16–09–2019 ರಿಂದ ದಿನಾಂಕ: 21–09–2019 (06 ದಿನಗಳು) ವರೆಗೆ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ (ಎಂ.ಜಿ.ಐ.ಆರ್.ಇ.ಡಿ.) ಶ್ರೀರಾಮಪುರ ಕ್ರಾಸ್, ಜಕ್ಕೂರು, ಬೆಂಗಳೂರಿನಲ್ಲಿ ಇಲ್ಲಿ ಆಯೋಜಿಸಲಾಗಿದೆ.

ವಯಸ್ಸು 18 ರಿಂದ 40, ವಿದ್ಯಾರ್ಹತೆ – ಕನಿಷ್ಠ 10ನೇ ತರಗತಿ, ಈ ಅವಧಿಯಲ್ಲಿ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಇರುವುದು. ಆಸಕ್ತರು ಅರ್ಜಿ ನಮೂನೆಗಾಗಿ ಹೆಚ್ಚಿನ ವಿವರಗಳನ್ನು www.mgired.kar.nic.in ವೆಬ್‌ಸೈಟ್‌ನಿಂದ ಪಡೆದು ಮೇಲ್ಕಾಣಿಸಿರುವ ವಿಳಾಸಕ್ಕೆ ಸಲ್ಲಿಸಲು ಕೋರಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 10–09–2019. ಪೂರ್ಣ ವಿವರಗಳೊಂದಿಗೆ ಭರ್ತಿಮಾಡಿದ ಅರ್ಜಿಗಳನ್ನು ಅಂಚೆ/ಇ–ಮೇಲ್ ಮೂಲಕ ಸಲ್ಲಿಸಬೇಕಿದೆ. ಈ ತರಬೇತಿಗೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಮೊಬೈಲ್/ಇ–ಮೇಲ್ ಮೂಲಕ ಮಾಹಿತಿಯನ್ನು ನೀಡಲಾಗುವುದು. ತರಬೇತಿಗೆ ಆಯ್ಕೆಗೊಂಡ ಅಭ್ಯರ್ಥಿಗಳು ತಮ್ಮ ಪ್ರಯಾಣ ವೆಚ್ಚವನ್ನು ತಾವೇ ಭರಿಸಬೇಕಿರುತ್ತದೆ.

ಈ ತರಬೇತಿಗೆ ಮೊದಲು ಸಲ್ಲಿಕೆಯಾಗುವ ಅರ್ಜಿಗಳ ಆಧಾರದ ಮೇಲೆ 10 ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು. ಉಳಿದ ಅಭ್ಯರ್ಥಿಗಳನ್ನು ಮುಂದಿನ ದಿನಗಳಲ್ಲಿ ಆಯೋಜಿಸಲಾಗುವ ತರಬೇತಿಯಲ್ಲಿ ಅವಕಾಶ ಕಲ್ಪಿಸಲಾಗುವುದು ಎಂದು ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಪ್ರಕಟಣೆ ತಿಳಿಸಿದೆ.

# ಗ್ರಾಹಕ ಸಂವಾದ ಸಭೆ

ಬೆಂಗಳೂರು ಆಗಸ್ಟ್ 16: (ಕರ್ನಾಟಕ ವಾರ್ತೆ) :

ಬೆವಿಕಂ ವ್ಯಾಪ್ತಿಗೆ ಒಳಪಡುವ ಎಲ್ಲಾ ಉಪವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರದಂದು ಮಧ್ಯಾಹ್ನ 3:00 ರಿಂದ ಸಂಜೆ 5:30 ರವರಗೆ ಗ್ರಾಹಕ ಸಂವಾದ ಸಭೆಗಳನ್ನು ನಡೆಸಲಾಗುತ್ತಿದೆ. ಸದರಿ ಸಭೆಯಲ್ಲಿ ಗ್ರಾಹಕರು ಪಾಲ್ಗೊಂಡು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಮುಖಾಮುಖಿ ಚರ್ಚಿಸಿ ಪರಿಹರಿಸಿಕೊಳ್ಳಬಹುದಾಗಿದೆ.

ಈ ತಿಂಗಳ ಗ್ರಾಹಕ ಸಂವಾದ ಸಭೆ ದಿನಾಂಕ 17.08.2019 ರ ಶನಿವಾರ ಬೆವಿಕಂನ ಎಲ್ಲಾ ಉಪವಿಭಾಗಗಳಲ್ಲಿ ನಡೆಯಲಿದ್ದು, ಗ್ರಾಹಕರು ಈ ಸಭೆಯ ಸದುಪಯೋಗ ಪಡೆಯಬೇಕಾಗಿ ಬೆವಿಕಂ ಪ್ರಕಟಣೆ ತಿಳಿಸಿದೆ.

## Customer Interaction Meetings (CIM)

Bengaluru, August 16 (Karnataka Information)

Customer Interaction Meetings (CIM) are being conducted at all Sub Divisions of BESCOM on third Saturday of every month from 3.00pm to 5.30pm. Customers are requested to attended the above said meeting and get electricity related issues resolved having one to one interaction with concerned BESCOM official.

The CIM for the month of August is scheduled on 17.08.2019. In this regard all the esteemed consumers are requested to participate and make use of the opportunity in redressal of complaints says official press release.